Expenditure on Grow More Food Scheme from July 1947.

*ಪ್ರಶ್ನೆ 232.—ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಡಿಸ್ಟ್ರಿಕ್ಟ್—ಸಾರ್ವತ್ರಿಕ ಜನಾವಣೆಸ್ಥಾನ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ: —

(a) ಹೆಚ್ಚಿಗೆ ಆಹಾರ ಧಾನ್ಯಗಳನ್ನು ಬೆಳೆಯುವ ಯೋಜನೆಯ ಸಂಬಂಧದಲ್ಲಿ 1947ನೆಯ ಇಸವಿ ಜುಲೈ ತಿಂಗಳಿನ ಲಾಗಾಯಿತು ಇದುವರೆಗೆ ಖರ್ಚು ಮಾಡಿರುವ ಪೊಬಲಗೆಷ್ಟು;

(b) ಸದರಿ ಪೊಬಲಗಿನಲ್ಲಿ—
(i) ಸಿಬ್ಬಂದಿಗೆ
(ii) ಸಂಬಳಗಳಿಗೆ
(iii) ಮತ್ತು ಪ್ರಯಾಣದ ಭತ್ಯಗಳಿಗೆ ಖರ್ಚು ಮಾಡಿರುವ ಪೊಬಲಗೆಷ್ಟು;

(c) ಪೊಬಲಗಿನಲ್ಲಿ—
(i) ಗೊಬ್ಬರಕ್ಕಾಗಿ
(ii) ಬತ್ತನೆ ಬೀಜಗಳಿಗಾಗಿ
(iii) ಮತ್ತು ವ್ಯವಸಾಯದ ಸಲಕರಣೆಗಳಿಗಾಗಿ

ರೈತರಿಗೆ ಉಚಿತ ಗ್ರಾಂಟುಗಳ ರೂಪದಲ್ಲಿ ಕೊಟ್ಟ ಪೊಬಲಗೆಷ್ಟು?

ಉತ್ತರ.—ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಶಾಖೆಯ ಸಚಿವರು).—

(a)

1947–48	1948–49	1949–50 (1-7-49ರಿಂದ 31-3-50ರ ವರೆಗೆ) (1–4–50ರಿಂದ 31–12–50ರ ವರೆಗೆ)	1950–51
ರೂ.	ರೂ.	ರೂ.	ರೂ.
7,36,085	4,90,306	73,34,889	65,22,042

(b)

	1947–48 ರೂ.	1948–49 ರೂ.	1949–40 ರೂ.	1950–51 ರೂ.
(i) ಸಿಬ್ಬಂದಿ	15,691	*	30,08,562	2,92,866
(ii) ಸಂಬಳಗಳು	4,050	*	21,625	23,227
(iii) ಪ್ರಯಾಣ ಭತ್ಯಗಳು	2,493	*	14,856	27,461

*ವಿವರಗಳು ಸಿದ್ಧವಾಗಿ ದೊರೆಯುವಂತಿಲ್ಲ. ವಿಷಯಗಳನ್ನು ಶೇಖರಿಸಲಾಗುತ್ತಿದೆ.

(c) ಈ ಬಾಬುಗಳಿಗೆ ರೈತರಿಗೆ ಯಾವ ಉಚಿತ ಗ್ರಾಂಟುಗಳನ್ನೂ ಕೊಟ್ಟಿಲ್ಲ.

ಶ್ರೀ ಬಿ. ಚನ್ನಬೈರೇಗೌಡರು.—47–48ರಲ್ಲಿ ಮತ್ತು 48–49ರಲ್ಲಿ ಹೆಚ್ಚು ಆಹಾರ ಬೆಳೆಯಬೇಕೆಂಬ ಯೋಜನೆಯ ಬಗ್ಗೆ ಎಷ್ಟು ಖರ್ಚಾಗಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಉತ್ತರದ ಭಾಗದಲ್ಲಿ ತಿಳಿಸಿದೆ, ನೋಡಿ.

ಶ್ರೀ ಬಿ. ಚನ್ನಬೈರೇಗೌಡರು.—1949–50 ಅಂದರೆ 1–7–49 ರಿಂದ 31–3–50ರ ವರೆಗೂ ಮತ್ತು ಮುಂದಕ್ಕೆ 1–4–50ರಿಂದ 31–12–50ರ ವರೆಗೂ ತಿಳಿಸಿದ್ದು ಅದರ ಹಿಂದಿನ ವರ್ಷಗಳ ಖರ್ಚನ್ನು ತಿಳಿಸುವುದಕ್ಕೆ ಏಕೆ ಆಗಲಿಲ್ಲ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಿಳಿಸಿದೆ, Information is being collected ಎಂತ.

ಶ್ರೀ ಬಿ. ಚನ್ನಬೈರೇಗೌಡರು.—ಮುಂದಿನ ವರ್ಷಗಳ ದಾಖಲೆಯನ್ನು ಕೊಡಲು ಸಿದ್ಧವಾಗಿರುವಾಗ ಹಿಂದಿನ ಲೆಕ್ಕದ ದಾಖಲೆ ಕೊಡಲು ಏನು ಕೊಂದರೆ ಇದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಪಶೀಲುಗಳು ಸದ್ಯಕ್ಕೆ ದೊರೆಯುವಂತಿಲ್ಲ. ಇನ್ನೂ ಸಂಗ್ರಹಣೆ ಮಾಡುವುದರಲ್ಲಿದ್ದೇವೆಂದು ಹೇಳಿದೆ.

ಶ್ರೀ ಬಿ. ಚನ್ನಬೈರೇಗೌಡರು.— 1948–49ರಲ್ಲಿ 4,90,306 ರೂಪಾಯಿಗಳು ಖರ್ಚಾಗಿದ್ದು ಅದರ ಮಾರನೆಯ ವರ್ಷವೇ ಏಕ್‌ದಂ 73,34,889 ರೂಪಾಯಿಗಳು ಖರ್ಚಾಗಿದೆ. ಇಷ್ಟು ಜಾಸ್ತಿ ಖರ್ಚಾಗಲು ಕಾರಣವೇನು ಸ್ವಾಮಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೆಚ್ಚು ಆಹಾರ ಬೆಳೆಸತಕ್ಕ ಯೋಜನೆ ಆಗ ಜಾರಿಗೆ ಬಂತು. ಆ ಕಾರಣ ಹೆಚ್ಚಾಗಿ ಖರ್ಚಾಗಿದೆ. 31–12–50ರಲ್ಲಿ ದುಡ್ಡು ಕಮ್ಮಿಯಾಗಿತ್ತು. ಆಗ ಕಡಿಮೆ ಖರ್ಚುಮಾಡಿದ್ದೇವೆ.

ಶ್ರೀ ಬಿ. ಚನ್ನಬೈರೇಗೌಡರು.—ಹಾಗೆ ಹೆಚ್ಚುಕಡಿಮೆ ಯಾಗಲು ಏನು ಕಾರಣ? ದುಡ್ಡಿಲ್ಲದೇ ಇದ್ದುದೋ ಅಥವ ಕೆಲಸ ನಡೆಯದೇ ಇದ್ದದೋ ಕಾರಣ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ದುಡ್ಡಿನ ಸರಬರಾಯಿ ಇದ್ದಂತೆಲ್ಲಾ ಖರ್ಚುಮಾಡಲಾಗಿದೆ.

ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—ಹೀಗೆ ಹೆಚ್ಚಾಗಿ ಹಣ ಖರ್ಚಾಗಿರುವುದರಲ್ಲಿ ಕೆರೆ ರಿಪೇರಿ ಖರ್ಚುಗಳೇನಾದರೂ ಸೇರಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಹೌದು ಸೇರಿದೆ.

ಶ್ರೀ ಎಂ. ಗೋವಿಂದರೆಡ್ಡಿಯವರು —ಈ ಹಣದಲ್ಲಿ ಎಲ್ಲಾ ರೆಸ್ಟೋರೇಷ್‌ಗಳ ಖರ್ಚೂ ಸೇರಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು, ಸೇರಿದೆ.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—(ಸಿ) ಪ್ರಶ್ನೆಗೆ ಉತ್ತರವಾಗಿ 'No free grants are given under these heads' ಎಂದು ತಿಳಿಸಿದ್ದೀರಿ. ಹಾಗಾದರೆ ಫ್ರೀಗ್ರಾಂಟ್ಸ್‌ಗಳನ್ನು ಇನ್ನಾವ ಹೆಡ್ಡಿನಲ್ಲಿ ಕೊಡಲಾಗಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— Under Irrigation head ಬಾವಿಗಳನ್ನು ತೆಗೆಸತಕ್ಕ ಬಗ್ಗೆ 500 ರೂಪಾಯಿಗಳನ್ನು ಉಚಿತವಾಗಿ ಕೊಡಲಾಗುತ್ತಿತ್ತು.

Sri H. SIDDAVEERAPPA.—What I wanted to know was, under the Grow More Food Scheme, what are the items under which free grants are given.

The Hon'ble Sri T. MARIAPPA — Only under well subsidy, in all other cases we render service at cost.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಇಷ್ಟು ಹಣ ಖರ್ಚುಮಾಡಿ ಇಲ್ಲಿಗೆ 3 ವರ್ಷಗಳಿಂದ ಎಷ್ಟು ಜಮೀನನ್ನು ಹೆಚ್ಚಿಗೆ ಸಾಗುವಳಿಗೆ ತರಲಾಗಿದೆ?

ಅಧ್ಯಕ್ಷರು.—ಆ ಉಪಪ್ರಶ್ನೆಗೆ ಆಗಲೇ ಉತ್ತರ ಕೊಟ್ಟಿದೆ.

ಈಗ ಅಲ್ಪ ಕಾಲಾವಧಿಯ ಪ್ರಶ್ನೆಯನ್ನು ತೆಗೆದು ಕೊಳ್ಳಲಾಗುತ್ತೆ.

SHORT NOTICE QUESTIONS AND ANSWERS.

Gandhi Museum at Nandi.

ಪ್ರಶ್ನೆ 15.—ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ):—

(a) ಮಹಾತ್ಮಾ ಗಾಂಧಿಯವರ ಸ್ಮಾರಕದ ಟ್ರಸ್ಟಿಗಳು, ನಾಲ್ಕು ಸ್ಥಳಗಳಲ್ಲಿ, ಎಂದರೆ ದೆಹಲಿ, ವಾರ್ಧಾ, ಸಬರಮತಿ ಮತ್ತು ದಕ್ಷಿಣ ಭಾರತದಲ್ಲಿರುವ ಯಾವುದಾದರೂ ಒಂದು ಸ್ಥಳ ಹೀಗೆ ನಾಲ್ಕು ಸ್ಥಳಗಳಲ್ಲಿ ವಸ್ತು ಸಂಗ್ರಹಶಾಲೆಗಳನ್ನು (ಮ್ಯೂಜಿಯಂಗಳನ್ನು) ಸ್ಥಾಪಿಸಬೇಕೆಂದು ತೀರ್ಮಾನಿಸಿರುವರೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ;

(b) ಗಾಂಧೀ ಸ್ಮಾರಕ ನಿಧಿಗಾಗಿ ಮೈಸೂರು ಸಂಸ್ಥಾನದಲ್ಲಿ ಶೇಖರವಾಗಿರತಕ್ಕ ಮೊಬಲಗೆಷ್ಟು;

(c) ಗಾಂಧಿಯವರ ನಾಮಾಂಕಿತದ ವಸ್ತು ಸಂಗ್ರಹ ಶಾಲೆಯನ್ನು ಮೈಸೂರು ಸಂಸ್ಥಾನದಲ್ಲಿ ಸ್ಥಾಪಿಸುವುದು ಯುಕ್ತವೆಂದು ಸರ್ಕಾರದವರು ಯೋಚಿಸಿರುವರೇ;

(d) ವಸ್ತು ಸಂಗ್ರಹ ಶಾಲೆಯನ್ನು ನಂದಿಯಲ್ಲಿ ಸ್ಥಾಪಿಸುವುದು ಅನುಕೂಲವಲ್ಲವೆ?

ಉತ್ತರ.—ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು (ಹಣಕಾಸು ಮತ್ತು ಕೈಗಾರಿಕಾ ಸಚಿವರು).—

(a) ಬಂದಿದೆ.

(b) ರೂ. 23,69,395-15-10. (ರಾಮನಗರದಲ್ಲಿರುವ ಗಾಂಧಿ ಸ್ಮಾರಕ ನಿಧಿಯ ಮೈಸೂರು ಸಂಸ್ಥಾನದ ಶಾಖೆಯ ಸಂಚಾಲಕರವರಿಂದ ತಿಳಿಸಲ್ಪಟ್ಟಿರುವ ಮೇರೆಗೆ.)

(c) ಹೌದು.

(d) ನಾಲ್ಕನೆಯ ವಸ್ತು ಸಂಗ್ರಹ ಶಾಲೆಯನ್ನು ನಂದಿಯಲ್ಲಿ ಸ್ಥಾಪಿಸುವ ವಿಷಯವಾಗಿ ನವದೆಹಲಿಯಲ್ಲಿರುವ ಗಾಂಧೀ ರಾಷ್ಟ್ರೀಯ ಸ್ಮಾರಕನಿಧಿಯ ಟ್ರಸ್ಟಿಗಳ ಬೋರ್ಡ್ ಮಂಡಲಿಯವರೊಡನೆ ಪತ್ರವ್ಯವಹಾರ ನಡೆಯಿಸಲಾಗಿದೆ. ಅಕ್ಕ ಪಕ್ಕದಲ್ಲಿ ಒಳ್ಳೆ ಮೈದಾನ ಪ್ರದೇಶಗಳಿರುವಂಥ ಸರಿಯಾದ ಒಂದು ನಿವೇಶನವನ್ನು ಒದಗಿಸುವ ಸಂಬಂಧದಲ್ಲಿ ಪ್ರಾರಂಭದ ಪರಿಶೀಲನೆಗಳನ್ನು ನಡೆಯಿಸುತ್ತಿರಲಾಗಿದೆ.

ಶ್ರೀ ಬಿ. ಹುಚ್ಚೇಗೌಡರು.—ಈಗ ವಸೂಲಾಗಿರುವ ಮೊಬಲಗು ರೂ. 23,69,395-15-10 ಕಾಸುಗಳೆಂದು ತಿಳಿಸಲಾಗಿದೆ. ಅಂದರೆ ಇನ್ನೂ ಈ ಮೊಬಲಗನ್ನು ವಸೂಲು ಮಾಡಲಾಗುತ್ತಿದೆಯೋ ಅಥವಾ ನಿಲ್ಲಿಸಿಬಿಟ್ಟಿರುತ್ತದೆಯೋ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ವಸೂಲ ಮಾಡುತ್ತಿಲ್ಲ, ನಿಲ್ಲಿಸಲಾಗಿದೆ.

ಶ್ರೀ ಬಿ. ಹುಚ್ಚೇಗೌಡರು.—ಈಗ ತಾವು ನಂದಿಯಲ್ಲಿ ಮಾಡಬೇಕೆಂದಿರುವ ಕೆಲಸವನ್ನು ಕೇಂದ್ರದವರು ಒಪ್ಪಿದ್ದಾರೆಯೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇನ್ನೂ ಇಲ್ಲ.

ಶ್ರೀ ಬಿ. ಹುಚ್ಚೇಗೌಡರು.—ತಾವು ತಮ್ಮ ಯೋಜನೆಯೇನಿರುತ್ತೆಂಬುದನ್ನು ತಯಾರಿಸಿ ಅವರಿಗೆ ಒಪ್ಪಿಗೆ ನೂಚಿಸಲು ಕಳುಹಿಸಿಕೊಟ್ಟಿದ್ದೀರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹೌದು.

ಶ್ರೀ ಬಿ. ಹುಚ್ಚೇಗೌಡರು.—ಮೈಸೂರು ದೇಶದಲ್ಲಿ ವಸೂಲಾದ ಹಣವನ್ನು ಯಾವ ರೀತಿ ವಿನಿಯೋಗ ಮಾಡಬೇಕೆಂದು ತೀರ್ಮಾನಮಾಡಿದ್ದೀರಿ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇದಕ್ಕೆಲ್ಲಾ ಕೇಂದ್ರದವರೇ ವ್ಯವಸ್ಥೆ ಮಾಡಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಏನು ಆ ವ್ಯವಸ್ಥೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಸಂಚಾಲಕರನ್ನು ನೇಮಿಸುವುದು ಮತ್ತು ಒಂದು ಸಮಿತಿಯನ್ನು ಈ ಬಗ್ಗೆ ಸ್ಥಾಪಿಸಿ, ಅವರ ಸಲಹೆಗಳನ್ನು ಪಡೆಯುವುದು ಎಂಬುದಾಗಿ ಆಲೋಚನೆ ಮಾಡಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಇಲ್ಲಿನ ಹಣವನ್ನು ಇಲ್ಲೇ ಖರ್ಚು ಮಾಡಲು ಆಗುವುದಿಲ್ಲವೋ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಸೇಕಡ (ವಸೂಲಾದ ಹಣದ) 75ರಷ್ಟನ್ನು ಇಲ್ಲಿಗೂ, ಉಳಿದ 25ರಷ್ಟನ್ನು ಕೇಂದ್ರಕ್ಕೂ ಕೊಡಬೇಕೆಂದು ಎಲ್ಲ ಸಂಸ್ಥಾನಗಳಿಗೂ ಒಂದೇವಿಧವಾದ ತೀರ್ಮಾನ ಮಾಡಿದ್ದಾರೆ.

ಶ್ರೀ ಬಿ ಹುಚ್ಚೇಗೌಡರು.—ಈ ಹಣದಲ್ಲಿ ಬಹಳ ಭಾಗ ದುರುಪಯೋಗಪಡಿಸಲಾಗಿದೆಯೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಈ ಬಗ್ಗೆ ಎಲ್ಲ ಲೆಕ್ಕ ಪತ್ರಗಳೂ ಆಡಿಟ್ ಆಗಿದೆಯೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನೋಟೀಸ್.

ಶ್ರೀ ಬಿ. ಹುಚ್ಚೇಗೌಡರು.—ಇದೆಲ್ಲಾ ಸರ್ಕಾರದ ಪಿಜೆನ್ಸಿ ಮೂಲಕ ಅಥವಾ ಖಾಸಗಿ ಪಿಜೆನ್ಸಿ ಮೂಲಕ ಶೇಖರಣೆಯಾಯಿತು, ಈ ಫಂಡನ್ನು ಮ್ಯಾನೇಜ್ ಮಾಡುವವರು ಯಾರು?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಕೇಂದ್ರದಲ್ಲಿ ಒಂದು ಸಂಸ್ಥೆಯಿದೆ. ಅವರು ಇದನ್ನೆಲ್ಲಾ ನೋಡಿಕೊಳ್ಳುತ್ತಾರೆ.

ಶ್ರೀ ಬಿ ಹುಚ್ಚೇಗೌಡರು.—ಮೈಸೂರಿಗೆ ಸಂಬಂಧಪಟ್ಟ ಹಾಗೆ ಯಾರಿದ್ದಾರೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಸಂಚಾಲಕರು ಮತ್ತು ಸಲಹಾ ಸಮಿತಿಯವರು.

ಶ್ರೀ ಬಿ. ಹುಚ್ಚೇಗೌಡರು.—ಪಿಜೆನ್ಸಿ ಮುಖಾಂತರ ವಸೂಲು ಮಾಡಿದ್ದೀರೋ ಅಥವ ಹೊರಗಿನವರು ವಸೂಲು ಮಾಡಿದ್ದಾರೋ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಎಲ್ಲರೂ ಮಾಡಿದ್ದಾರೆ.